ಶ್ರೀ ಎ. ಆರ್. ಬದ್ರಿನಾರಾಯಣ್ .—ಅಲ್ಲಿ ಲೋಕಲ್ ಕ್ಯಾಂಡಿಡೇಟುಗಳು ಕೆಲಸ ಮಾಡುತ್ತಿದ್ದಾರೆ ಅವರನ್ನು ಮುಂದುವರಿಸಲು ಆರ್ಡರ್ ಮಾಡಿದೆ. ಆದರಲ್ಲಿ ಸ್ವಲ್ಪ ನಿಧಾನವಾಗಿದೆ. ಅದನ್ನು ಕೂಡಲೆ ಸರಿಪಡಿಸಲಾಗುತ್ತದೆ.

SRI B. B. SAYANAK .—To question whether payment of salaries of these posts is withheld in all such High Schools since April 1972, the answer is : Orders of continuance of the e posts have been already communicated to the Schools concerned. I want to know whether the salaries are withheld by the Department?

SRI A. R. BADRINARAYAN .—If the appointment orders are issued, the payment will be made.

ಶ್ರೀ ಜೆ.ಎಲ್. ಕಬಾಡಿ.—ಮಾರ್ಚಿಯಲ್ಲಿ ಆರ್ಡರ್ ಮಾಡಿದ್ದರೆ ಇಲ್ಲಿಯತನಕ ಅವರ ಸಂಬಳಗಳನ್ನು ಏಕೆ ಹಂಚಿಲಿಲ್ಲಾ? ಅವರ ಸೇವೆಯನ್ನು ೧೯೭೪ರ ವರೆಗೂ ಮುಂದುವರಿಸಲಾಗಿದೆ ಎಂದು ಹೇಳಿದೆ. ಮುಂದೆ ಅವರನ್ನು ಅಲ್ಲಿ ಖಾಯಂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಆರ್. ಬದ್ರಿನಾರಾಯಣ್ —ಈಗ ಅವರನ್ನು ಹಂಗಾಮಿಯಾಗಿ ನೇಮಿಸಿಕೊಳ್ಳಲಾಗಿದೆ ಬೇಸಿಗೆಯಲ್ಲಿ ಅವರನ್ನು ನಿವೃತ್ತಿ ಮಾಡುತ್ತಾರೆ. ಅನಂತರ ಅವರನ್ನು ೧೯೭೪ರವರೆಗೂ ಕಂಟಿನ್ಯೂ ಮಾಡಲಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ .—ಸರ್ಕಾರದವರು ಹೀಗೆ ಹಂಗಾಮಿ ಹುದ್ದೆಗಳನ್ನು ಮುಂದುವರಿಸುತ್ತಿರುವುದರಿಂದ ಹರಿಜನ ಗಿರಿಜನರಿಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಎ. ಆರ್. ಬದ್ರಿನಾರಾಯಣ್ .—ನಾನು ಮಾನ್ಯ ಸದಸ್ಯರಿಗೆ ಯಾವ ಅಭಿಪ್ರಾಯವನ್ನಾಗಲೀ ಅಥವಾ ಭರವಸೆಯನ್ನಾಗಲೀ ಕೊಡಲಿಲ್ಲ. ಎಲ್ಲರನ್ನೂ ರೆಕ್ರೂಟ್‌ಮೆಂಟ್ ನೇಮಗಳ ಮೇರೆಗೆ ನೇಮಕ ಮಾಡಿಕೊಳ್ಳಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ

SRI P. M. BANGI .—159 posts are planned posts. Whether the Government is aware of this fact?

SRI A. R. BADRINARAYAN .—These are not temporary posts. According to the statement which I have made, these posts can be continued till the end of September 1974. The Hon. Member can take this statement for what it means.

MADAM SPEAKER.—Question No. 530 is held over as the Hon. Minister concerned is not here.

TUNGABHADRA BOARD

534. SRI B. SATYANARAYAN SINGH (Hospet).—

Will the Minister of State for Major Irrigation be pleased to state :—

(*a*) when the Tungabhadra Board was constituted ;

(*b*) whether the Chairman of the said Board is a full time Chairman ;

(c) if not, whether Government have taken steps to have a full time Chairman to the said Board ;

(d) whether any Executive Engineer of this State as against a Superintending Engineer of Andhra State is representing Mysore on the said Board ;

(e) whether there is any proposal to appoint a Chief Engineer from this State to represent Mysore in the T. B. Board ;

(f) if so, whether the headquarters of the P. W. D. Irrigation Circle at Dharwar would be shifted to T. B. Dam to enable the Chief Engineer to attend to the work of the Board ?

SRI H. N. NANJEGOWDA (Minister of State for Major Irrigation).—

(a) In September, 1953.

(b) Present Chairman is a part-time Chairman.

(c) Government of India has been moved for the abolition of the Tungabhadra Board.

(d) As per the set up in existence, the Chief Engineer for Irrigation Branch is from Mysore, the Superintending Engineer is from Andhra Pradesh and the Executive Engineer is from Mysore.

(e) The Chief Engineer, Irrigation (South), Mysore is the Chief Engineer of Irrigation Branch, Tungabhadra Board.

(f) The headquarters of the Chief Engineer is at Bangalore and therefore the question relating to shifting of any Dharwar Office does not arise.

SRI B SATYANARAYAN SINGH.—May I know under what specific circumstances and for what reasons the Thungabhadra Board was constituted ?

† SRI H. N. NANJE GOWDA.—It was constituted for the following purposes : For completion of the construction of the sanctioned Thungabhadra Project and also for its operation and maintenance during the period of such construction.

For regularisation of supplies of water and power in accordance with such rules as may be made in this behalf by the Board.

For maintenance of dam and reservoir of the project.

For maintenance of the main canal and all other works relating to both the States of Andhra and Mysore.

For granting of leases for fisheries in the Reservoir and in the main canal.

For appropriate utilisation of land acquired for the purposes of the project ;

For these purposes the Board was constituted.

SRI B. SATYANARAYAN SINGH.—You have not replied under what circumstances this Board was constituted?

ಶ್ರೀ ಎಚ್.ಎನ್. ನಂಜೇಗೌಡ.—ಧಾರವಾಡದಲ್ಲಿ ರೀಆರ್ಗನೈಜೇಷನ್ ಆದಾಗ ಮುದ್ರಾಸಿನಲ್ಲಿದ್ದ ಕೆಲವು ಭಾಗಗಳು ಮತ್ತು ಸೌಕರ್ಯಗಳು ಆಂಧ್ರಕ್ಕೆ ಹೋದುವು, ಮೈಸೂರು ಮತ್ತು ಆಂಧ್ರ ಹೀಗೆ ಎರಡು ರಾಜ್ಯಗಳಿಗೆ ಸೇರಿದುದರಿಂದ ಆ ಬೋರ್ಡ್ ರಚನೆ ಮಾಡಬೇಕಾಯಿತು.

SRI B. SATYANARAYAN SINGH.—In answer to (e) and (i) you have stated the Chief Engineer (South) is looking after this work and there is no question of shifting of the Dharwar Office. If it is not possible to shift the office of the Dharwar, may I ask is it not possible to shift the North Chief Engineer to Thungabhadra Headworks? He can look after both the duties. Is there any proposal like that before the Government?

SRI H. N. NANJE GOWDA.—We are examining whether it is necessary to post a Chief Engineer there. Now the Chief Engineer, Irrigation South is looking after these works. We are examining whether it is necessary to post a Chief Engineer. If it is necessary, we will take action.

SRI B. SATYANARAYAN SINGH.—Has it not come to the notice of the Government that 25 per cent of the Government servants have been retrenched without making any alternative arrangement for work because they are the major beneficiaries?

SRI H. N. NANJE GOWDA.—It has not come to the notice of the Government. We will examine if it comes to the notice of the Government.

ಶ್ರೀ ಎಂ. ಎಸ್. ಕೃಷ್ಣನ್.—ತುಂಗಭದ್ರ ಮಂಡಲಿಯನ್ನು ರದ್ದುಪಡಿಸಬೇಕೆಂದು ಶಿಫಾರಸು ಮಾಡಿರುವುದೇಕೆ?

ಶ್ರೀ ಎಚ್. ಎನ್. ನಂಜೇಗೌಡ.—ಅಲ್ಲಿ ಕೆಲಸ ಪೂರ್ತಿಯಾಗಿದೆ, ಈಗ ಕೆಲವು ಭಾಗ ಮಾತ್ರ ಬೋರ್ಡಿನ ವ್ಯಾಪ್ತಿಗೊಳಪಟ್ಟಿದೆ. ಮತ್ತು ನಮ್ಮ ಕಡೆಗೆ ಹೆಚ್ಚು ಸಹಾಯವಾಗಬೇಕಾಗಿದೆ. ಅದರ ದೆಸೆಯಿಂದ ಆ ಬೋರ್ಡಿನ ಆವಶ್ಯಕತೆಯಿಲ್ಲ ಎಂದು ತಿಳಿಸಲಾಗಿದೆ.

ಶ್ರೀ ಬಿ. ಇ. ರಾಮಯ್ಯ.—ತುಂಗಭದ್ರ ಬೋರ್ಡಿನಲ್ಲಿ ಆಂಧ್ರದ ಅಧಿಕಾರಿಗಳು ಹೆಚ್ಚಾಗಿರುವುದರಿಂದ ನಮಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಆಂಧ್ರದವರು ತೇಕಡ ೬೫ರಷ್ಟು ಇದ್ದಾರೆ, ಮೈಸೂರಿನವರು ಸೇಕಡಾ ೩೫ರಷ್ಟು ಇದ್ದಾರೆ. ನೀರಾವರಿ ವಿಭಾಗದ ಮುಖ್ಯ ಎಂಜಿನಿಯರು ಮೈಸೂರಿನವರು, ಆಂಧ್ರದ ಸೂಪರಿಂಟೆಂಡಿಂಗ್ ಎಂಜಿನಿಯರು ಮತ್ತು ಮೈಸೂರಿನ ಎಕ್ಸಿಕ್ಯುಟಿವ್ ಎಂಜಿನಿಯರು ಬೋರ್ಡಿನಲ್ಲಿದ್ದಾರೆ. ಇದಕ್ಕೆ ರಾಜ್ಯದ ಒಪ್ಪಿಗೆಯಾಗಿದೆ. ಇದಕ್ಕೆ ಯಾವರೀತಿ ಪರಿಹಾರ ಹುಡುಕಬೇಕು ಎಂದು ಸರಕಾರದವರು ಲೀಗಲ್ ಆಸ್‌ಪೆಕ್ಟ್ ಮುಂತಾದ್ದನ್ನೆಲ್ಲಾ ಪರಿಶೀಲಿಸುತ್ತಿದ್ದಾರೆ.

ಶ್ರೀ ಸಿ. ಆಂದಾನಪ್ಪ.—ಈ ಬೋರ್ಡಿನ ಚೇರ್‌ಮೆನ್ನರು ಯಾರು?

ಶ್ರೀ ಎಚ್. ಎನ್. ನಂಜೇಗೌಡ.—ಸೆಂಟ್ರಲ್ ಇರಿಗೇಷನ್ ಅಂಡ್ ಪವರ್‌ಗೆ ಸಂಬಂಧಪಟ್ಟ ಜಾಯಿಂಟ್ ಸೆಕ್ರೆಟರಿಯವರು.

ಶ್ರೀ ಸಿ. ಆಂದಾನಪ್ಪ.—ಅವರು ಶ್ರೀ ಕೆ. ಎಲ್. ರಾಯರ ಅಂಡರ್ ಸೆಕ್ರೆಟರಿ ಎಂಬುದು ನಿಜವೇ?

(ಉತ್ತರವಿಲ್ಲ)